# ರೈತರಿಗೆ ಲಾಭದಾಯಕ ಬೆಲೆ ಹಕ್ಕನ್ನು ನೀಡಬೇಕು: ಕಮ್ಮರಡಿ

**ವಿಕ ಸುದ್ದಿಲೋಕ** ಬೆಂಗಳೂರು

ರೈತರಿಗೆ ಲಾಭದಾಯಕ ಬೆಲೆ ಹಕ್ಕನ್ನು ನೀಡುವ ಅವಶ್ಯಕತೆ ಇದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಟಿ.ಎನ್ ಪ್ರಕಾಶ್ ಕಮ್ಮರಡಿ ಹೇಳಿದರು.

ನಗರದ ಗಾಂಧಿ ಭವನದಲ್ಲಿ ಸೋಮವಾರ ಡಿ.ಡಿ ಭರಮಗೌಡ್ರ 'ಬದುಕು-ಬೇಸಾಯ' ಪುಸ್ತಕ ಲೋಕಾರ್ಪಣೆಸಮಾರಂಭದಲ್ಲಿಮಾತನಾಡಿ,''ರೈತರು ಬೆಂಬಲ ಬೆಲೆ ಪಡೆಯುವ ಹಕ್ಕು ಮಾತ್ರವಲ್ಲದೆ ಲಾಭದಾಯಕ ಬೆಲೆ ಹಕ್ಕನ್ನು ಪಡೆಯುವ ಕಾನೂನು ರೂಪಿಸಬೇಕು,''ಎಂದು ತಿಳಿಸಿದರು.

''ರಾಜ್ಯದಲ್ಲಿ ಶೇ.42ರಷ್ಟು ಕೃಷಿ ಉತ್ಪನ್ನಗಳು ಮಾತ್ರ ಎಪಿಎಂಸಿಗೆ ಬರುತ್ತಿದ್ದು,ಇವುಗಳಲ್ಲಿ ಶೇ.38 ಉತ್ಪನ್ನಗಳಿಗೆ ಮಾತ್ರ ಬೆಂಬಲ ಬೆಲೆ ಸಿಗುತ್ತಿದೆ,'' ಎಂದು ಅಂಕಿ ಅಂಶಗಳ ಸಹಿತ ವಿವರಿಸಿದರು.

''ಭರಮಗೌಡರು ಕೃಷಿ ವಿಜ್ಞಾನಿಗಳು ಸಮಾಜಮುಖಿ ಯೋಚನೆ ಮಾಡಲು ಕಾರಣರಾದವರು. ಅವರ ಮಾತಿನಲ್ಲಿ ವ್ಯವಹಾರಿಕ ಅನುಭವವಿತ್ತು. ರೈತರ ಪರ ನೇರ-ನಿಷ್ಠುರವಾಗಿ ಮಾತನಾಡುತ್ತಿದ್ದರು,''ಎಂದರು.



**ನಗರದ ಗಾಂಧಿ ಭವನದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಗಿಡಕ್ಕೆ ನೀರೆರೆಯುವ ಮೂಲಕ ಪಾರ್ವತಿ ಭರಮಗೌಡ್ರ ಅವರು 'ಬದುಕು-ಬೇಸಾಯ' ಪುಸ್ತಕ ಲೋಕಾರ್ಪಣೆ ಮಾಡಿದರು.**

ಮಾಜಿ ಶಾಸಕ ಡಿ.ಆರ್ ಪಾಟೀಲ್ ಮಾತನಾಡಿ,''ಬಹುತೇಕ ಜನಪ್ರತಿನಿಧಿಗಳು ರೈತ ಕುಟುಂಬದ ಹಿನ್ನೆಲೆಯಿಂದ ಬಂದರೂ ರೈತರ ಪರವಾದ ಕಾನೂನು ಜಾರಿಯಾಗುತ್ತಿಲ್ಲ, ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಕೃಷಿ ಉತ್ಪನ್ನಗಳನ್ನು ಖರೀದಿಸುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು,''ಎಂದು ಆಗ್ರಹಿಸಿದರು.

''ಉದ್ಯಮಿಗಳಿಗೆ, ವ್ಯಾಪಾರಿಗಳಿಗೆ ಕಾಲವಿರುವಂತೆ ಶೀಘ್ರದಲ್ಲಿಯೇ ರೈತರ ಕಾಲ ಬರುತ್ತದೆ. ಊರಿನಲ್ಲಿರುವ ಹೊಲವನ್ನು ಮಾರಬೇಡಿ. ರೈತರ ಪರ ಕಾನೂನು ಜಾರಿಯಾಗದೇ ಇದ್ದರೆ, ವ್ಯವಸ್ಥೆಯಲ್ಲಿ ಬದಲಾವಣೆ ತರದಿದ್ದರೆ ದೊಡ್ಡ ಕ್ರಾಂತಿಯಾಗುತ್ತದೆ,''ಎಂದು ಎಚ್ಚರಿಸಿದರು.

ಪರಿಸರವಾದಿ ಎ.ಎನ್ ಯಲ್ಲಪ್ಪ ರೆಡ್ಡಿ ಮಾತನಾಡಿ,''ಬಹಳಷ್ಟು ರೈತರು ಆತ್ಮಹತ್ಯೆ ಮಾಡಿಕೊಂಡರೂ ಸರಕಾರಕ್ಕೆ ಕನಿಕರವಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಗೆ ಕರೆದು ಆತಿಥ್ಯ ನೀಡುವ ಸರಕಾರ ರೈತರನ್ನು ನಿರ್ಲಕ್ಷಿಸಿದೆ, ಬೆಂಬಲ ಬೆಲೆ ನೀಡಿ ಕೃಷಿಕರನ್ನು ಉಳಿಸ ಬೇಕಿದೆ''ಎಂದರು.

ಕೃತಿಯ ಕುರಿತು ಮಾತನಾಡಿದ ಸಾವಯವ ಕೃಷಿಕ ರಾಜು ಕೊರವನವರ,''ಯೋಚನೆಗಳು ಕೃಷಿಕರಿಗೆ ಮಾರ್ಗದರ್ಶಿಯಾಗಿದೆ. ಪ್ರತಿಯೊಬ್ಬ ರೈತರು ಓದಲೇ ಬೇಕಾದ 'ಕೃಷಿ ಕೈಪಿಡಿ' ಎಂದು ಹೇಳಿದರು.

ಬದುಕು-ಬೇಸಾಯ ಕೃತಿಯ ಲೇಖಕಿ ಗಾಯತ್ರಿಯವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಪಾರ್ವತಿ ಭರಮಗೌಡ್ರ, ಚಿಂತಕ ಪ್ರೊ.ಕಾಳೇಗೌಡ ನಾಗವಾರ, ವಿಜ್ಞಾನಿ ಪಿ.ಆರ್ ಶೇಷಗಿರಿ, ಪತ್ರಕರ್ತ ಹರ್ಷವರ್ಧನ ಶೀಲವಂತರ್ ಮೊದಲಾದವರು ಉಪಸ್ಥಿತರಿದ್ದರು.

---

**ಕನ್ನಡಪ್ರಭ**

# ನ್ಯಾಯಯುತ ಬೆಲೆ ಕೃಷಿಕರ ಹಕ್ಕಾಗಲಿ

## 'ಬದುಕು ಬೇಸಾಯ' ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಅಭಿಪ್ರಾಯ

**ಕನ್ನಡಪ್ರಭ ವಾರ್ತೆ** ಬೆಂಗಳೂರು

ಬೆಳೆ ಬೆಳೆಯಲು ಮಾಡಿದ ಖರ್ಚಿಗಿಂತಲೂ ಹೆಚ್ಚಿನ ಬೆಲೆಗೆ ಉತ್ಪನ್ನಗಳನ್ನು ಮಾರಾಟ ಮಾಡುವ ಹಕ್ಕು ರೈತರಿಗೆ ಅಗತ್ಯವಾಗಿ ಸಿಗಬೇಕಿದೆ ಎಂದು ರಾಜ್ಯ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ಅಭಿಪ್ರಾಯಪಟ್ಟಿದ್ದಾರೆ.

ಸೋಮವಾರ ನಗರದ ಗಾಂಧಿ ಭವನದಲ್ಲಿ ಆಯೋಜಿಸಿದ್ದ ಡಿ.ಡಿ.ಭರಮಗೌಡ್ರ ಅವರ 'ಬದುಕು-ಬೇಸಾಯ' ಪುಸ್ತಕ ಬಿಡುಗಡೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಉತ್ಪಾದನೆಯಾಗುವ ಕೃಷಿ ಉತ್ಪನ್ನಗಳ ಪೈಕಿ ಶೇ.42ರಷ್ಟು ಮಾತ್ರ ಸರ್ಕಾರಿ ಸ್ವಾಮ್ಯದ ಎಪಿಎಂಸಿಗಳಿಗೆ ಬರುತ್ತಿವೆ. ಇನ್ನುಳಿದವು ರೈತರ ಹೊಲಗಳು ಹಾಗೂ ಮನೆಗಳಲ್ಲಿಯೇ ಮಾರಾಟವಾಗುತ್ತಿವೆ. ಇನ್ನು ಎಪಿಎಂಸಿಗಳಿಗೆ ಬರುವವರಲ್ಲಿ ಶೇ.38ರಷ್ಟು ಜನರಿಗೆ ಮಾತ್ರ ಬೆಂಬಲ ಬೆಲೆ ಸಿಗುತ್ತಿದೆ ಎಂದರು.

ರೈತರು ಉತ್ಪಾದನೆ ಮಾಡುವ ವೆಚ್ಚಕ್ಕಿಂತ ಹೆಚ್ಚಿನ ಬೆಲೆಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ಹಕ್ಕು ರೈತರಿಗೆ ಸಿಗಬೇಕು. ತಾವು ಹಾಕಿದ ಬಂಡವಾಳಕ್ಕಿಂತ ಕಡಿಮೆ ದರ ರೈತರಿಗೆ ಸಿಕ್ಕರೆ ಹೇಗೆತಾನೆ ಅವರು ಕೃಷಿಯಲ್ಲಿ ಆಸಕ್ತಿ ಹೊಂದಲು ಸಾಧ್ಯ ಎಂದು ಪ್ರಶ್ನಿಸಿದ ಅವರು,



**ಬೆಂಗಳೂರಿನಲ್ಲಿ ಸೋಮವಾರ ಆಯೋಜಿಸಿದ್ದ ಡಿ.ಡಿ.ಭರಮಗೌಡ್ರ ಅವರ 'ಬದುಕು-ಬೇಸಾಯ' ಪುಸ್ತಕವನ್ನು ಸುಸ್ಥಿರ ಗ್ರಾಮೀಣಾಭಿವೃದ್ಧಿ ಹರಿಕಾರ ಡಿ.ಆರ್.ಪಾಟೀಲ್ ಬಿಡುಗಡೆ ಮಾಡಿದರು. ಈ ವೇಳೆ ಕಾಳೇಗೌಡ ನಾಗವಾರ ಹಾಗೂ ಪಾರ್ವತಿ ಭರಮಗೌಡ್ರ ಹಾಜರಿದ್ದರು.**

ಬೆಂಬಲ ಬೆಲೆ ಎನ್ನುವುದು ರೈತರಿಗೆ ಕಾನೂನಿನ ಪ್ರಕಾರ ಸಿಗುವ ಹಕ್ಕಾಗಬೇಕು ಎಂದು ಅವರು ತಿಳಿಸಿದರು.

ಸುಸ್ಥಿರ ಗ್ರಾಮೀಣಾಭಿವೃದ್ಧಿ ಹರಿಕಾರ ಡಿ.ಆರ್.ಪಾಟೀಲ್ ಅವರು ಮಾತನಾಡಿ, ಬೆಂಬಲ ಬೆಲೆಗಿಂತ ಕಡಿಮೆ ಬೆಲೆಗೆ ಕೃಷಿ ಉತ್ಪನ್ನಗಳನ್ನು ಖರೀದಿ ಮಾಡುವವರ ವಿರುದ್ಧ ಕ್ರಿಮಿನಲ್ ಕೇಸು ದಾಖಲಿಸಬೇಕು. ಆಗ ಮಾತ್ರ ರೈತರ ಕಷ್ಟಗಳಿಗೆ ಪರಿಹಾರ ಸಿಗಲು ಸಾಧ್ಯ. ವಿಧಾನಸಭೆ ಹಾಗೂ ಸಂಸತ್ತಿನಲ್ಲಿರುವ ಬಹುತೇಕ ಶಾಸಕರು ಹಾಗೂ ಸಂಸದರು ರೈತ ಕುಟುಂಬಗಳಿಂದ ಬಂದಿರುವವರೇ ಆಗಿದ್ದಾರೆ. ಆದರೆ, ರೈತರಿಗೆ ಒಳಿತು ಮಾಡುವ ಕಾಯ್ದೆಗಳನ್ನು ಜಾರಿಗೆ ತರುವುದೇ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಸರ್ಕಾರ ಇತ್ತೀಚಿನ ದಿನಗಳಲ್ಲಿ ಒಣ ಬೇಸಾಯವನ್ನು ನಿರ್ಲಕ್ಷಿಸುತ್ತಿದ್ದು, ನೀರಾವರಿ ರೈತರ ಸಮಸ್ಯೆಗಳಿಗೆ ಹೆಚ್ಚು ಆದ್ಯತೆ ನೀಡ ಲಾಗುತ್ತಿದೆ. ಆದರೆ, ಶೇಂಗಾ, ಜೋಳದಂತಹ ಬೆಳೆಗಳನ್ನು ಬೆಳೆಯುವ ಶೇ.70ರಷ್ಟು ಒಣ ಬೇಸಾಯಗಾರರ ಸಮಸ್ಯೆಗಳನ್ನು ಕೇಳು ವವರಿಲ್ಲ. ಈ ನೀತಿಯನ್ನು ಮುಂದುವರಿಸಿದರೆ ಮುಂದೊಂದು ದಿನ ಕಾಂತ್ರಿಯಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದ ಅವರು, ಕೃಷಿ ವಿಜ್ಞಾನಿಗಳು ತಮಗೆ ಬೇಕಾದ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಬದಲು ರೈತರಿಗೆ ಬೇಕಾದ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲು ಮುಂದಾಗಲಿ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪರಿಸರವಾದಿ ಎ.ಎನ್.ಯಲ್ಲಪ್ಪರೆಡ್ಡಿ, ಕಾಳೇಗೌಡ ನಾಗವಾರ, ಕೃಷಿ ವಿಜ್ಞಾನಿ ಪಿ.ಆರ್.ಶೇಷಗಿರಿರಾವ್, ಸಾವಯವ ಕೃಷಿಕ ರಾಜು ಕೊರವನವರ, ಪಾರ್ವತಿ ಭರಮಗೌಡ್ರ ಹಾಜರಿದ್ದರು.